ತುಮಕೂರು ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್ರೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಶಿರಾ ತಾಲ್ಲೂಕು ಲಕ್ಕನಹಳ್ಳಿಲಿರುವ ಗುಜ್ಜಾರಪ್ಪನ ಮಗ ಕರೀತಿಮ್ಮನ ವಿಷಯದಲ್ಲಿ—

1884ನೇ ಇಸವಿ ದಿವಾಳಿ ಕೇಸ್ ನಂಬರ್ 2.

ಹುಕ್ಕುಂ.

ಮೇಲ್ಕಂಡ ಕರೀತಿಮ್ಮನು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು ರೂಬರೂ ಅರ್ಜೀದಾರನಾದ ಕರೀತಿಮ್ಮನ ಪರವಾಗಿ ಅವನನ್ನು ಮತ್ತು ಸದರೀಯವನ ಲೇಣೇದಾರ್ರಾದ ಸೋಮಲಿಂಗಂಣ 1, ಸಿದ್ದೇಗೌಡ 1, ಇವರ ತರಫ್ ಹಾಜರಾದ ಸಿದ್ದೇಗೌಡರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಲಿರುವ ಶಿರಿಯಂಣನ ಮಗ ಸೋಮಲಿಂಗಂಣ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಕರಿತಿಮ್ಮನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀ ಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿತಿಳಿಯಬಂದ ಅವರಗಳ ವಾಸಸ್ಥಳ.	ಜೊತೆಲಗ್ಗು.	ಯಾವಾಗ ದೇಣೆ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರಾ.
1	ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಲಿರುವ ಸೋಮಲಿಂಗಂಣ ..	144-8-0	16ನೇ ನವಂಬರ್ 1883.	ಮದ್ದಗಿರಿ ಮುನ್ಸಿಫ್ ಕೋರ್ಟು 1880ನೇ ಇಸವಿ 190ನೇ ನಂಬರ್ ಡಿಕ್ರಿ.	
2	ಶಿರಾ ತಾಲ್ಲೂಕು ಹುಲಿಕುಂಟೇಲಿರುವ ಸಿದ್ದೇಗೌಡ	10-0-0	ಡಿಟೋ	ಸಾಲ ತಕ್ಕೊಂಡ ಬಗೆ.	

1884ನೇ ಇಸವಿ ಫಿಬ್ರವರೀ 13ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನವ್ವ್ ದಸ್ತ ಖತ್ ನಿಸಿ ಕೊಡಲ್ಪಟ್ಟಿತು.

ಸಿ. ಕೆ ಸ್,
ಸಬ್ ಜಡ್ಜ.

ತಾರೀಖು 25ನೇ ಫಿಬ್ರವರೀ 1884.

1872ನೇ ಇಸವಿ Xನೇ ಆಕ್ಟೆಂಬ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 23ನೇ ಸೆಕ್ಷನಿಗನುಸಾರವಾಗಿ ತುರುವೇಕೆರೆ ತಾಲ್ಲೂಕು ಆಕ್ಟಿಂಗ್ ಡಿಪ್ಯೂಟಿ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾದ ಸಿ. ನಾಗೇಶ್ವರೈಯ್ಯನವರಿಗೆ ತುಮಕೂರು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಂದ ಇದರಡೀ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ:—

(1) ಲಾಷ್‌ವಿಚಾರಣೆ ಬಗ್ಯೆ ಅಧಿಕಾರ ಸೆಕ್ಷರ್ (135.)

(2) ವಿಚಾರಣೆ ಬಗ್ಗೆ ತಮಿಗೆ ಅಧಿಕಾರವಿರುವ ಮೊಕ್ಕದ್ದಮೆಗಳಲ್ಲಿ ತಕ್ಕೇರುಗಳ ಬಾಬತು ಫಿರಿಯಾದಿಗಳನ್ನು ದಾಖಲ್ಮಾಡಿಕೊಳ್ಳುವದಕ್ಕೆ ಅಧಿಕಾರ (ಸೆಕ್ಷರ್ 141.)

(3) ನಿರೋಧವಗ್ಯೆರೆಗಳನ್ನ ಅಡ್ಡೀಮಾಡುವಂತೆ ಹುಕ್ಕುಂ ಕೊಡುವದಕ್ಕೆ ಅಧಿಕಾರ (ಸೆಕ್ಷರ್ 518)

(4) ಬೂರ್‌ಬೂರ್ ಹೇಸಿಗೆ ಮಾಡುವದನ್ನ ನಿಷೇಧಿಸಿ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ (ಸೆಕ್ಷರ್ 519.)

ಮಹಮ್ಮದ್‌ಅಲ್ಲಿ, ಕೆ. ಬಿ.,
ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹರ್ ನಾಮಾ.

ತಾರೀಖು 3ನೇ ಮಾರ್ಚೀ 1884.

ಇದರಿಂದ ಪ್ರಕಟಪಡಿಸುವದೇನಂದರೆ, ಚಾಮರಾಜನಗರ ತಾಲ್ಲೂಕಿನಲ್ಲಿ ಖೆಡ್ಡಾಯಾನೆ ಅನೆಗಳನ್ನ ಹಿಡಿಯತಕ್ಕ ಕೆಲಸ ನಡಿಸಲ್ಪಡುವದರಿಂದ ಸಾಲ್ ಮಜಕೂರ್ ಮೇ 1ನೇ ಮರ್ಕುಂ ಲಾಗಾಯತು ಆಗಸ್ಟು 31ನೇ ಮರ್ಕುಂವರಿಗೆ, ಚಾಮರಾಜನಗರಕ್ಕೂ, ಹುಣಸೂರಿಗೂ, ಮಧ್ಯದಲ್ಲಿರುವ ಸರ್ಕಾರದ ರಸ್ತೆಗೆ ಪೂರ್ವ ದಿಕ್ಕಿನಲ್ಲಿರುವ ಯಾವ ಡಿಸ್ಟ್ರಿಕ್ಟ್, ಜಂಗ್ಲಿಯಲ್ಲಾಗಲಿ ಶಿಕಾರಿ ಆಡುವ ಬಗ್ಯೆ ಅಪ್ಪಣೆ ಕೊಡಲ್ಪಡುವದಿಲ್ಲವು.

ಎ. ಕುಪ್ಪುಸಾಮಿ ಮೊದಲಿಯಾರ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಫ್ರೆಂಚ್‌ರಾಕ್ಸ್ ಸಬ್ ಡಿವೀರ್ಜ.

ತಾರೀಖು 27ನೇ ಮಾಹೆ ಫಿಬ್ರವರೀ 1884ನೇ ಇಸವಿ, ಮೊಕ್ಕಾಂ ಹಿರೋಡೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಅತ್ತಿಕುಪ್ಪಾ ತಾಲ್ಲೂಕು ಕಿಕ್ಕೇರಿ ಕಸಬಾ ಗ್ರಾಮದಲ್ಲಿ ಇರುವ ಲೇಟ್ ತಾಲ್ಲೂಕು ಕಛೇರಿಯನ್ನು ಯಿಲ್ಲಿನ ಸಾಲ್ ಗುದಸ್ತೆ ಡಿಸಂಬರ್ 1ನೇ ಮರ್ಕುಂ 692–1032ನೇ ನಂಬರ್ ಹುಕ್ಕುಂ ಅನುಸರಿಸಿ, 1884ನೇ ಇಸವಿ ಏಪ್ರೆಲ್ 3ನೇ ದಿವಿ 11 ಘಂಟೆಗೆ ಕಿಕ್ಕೇರಿ ಮೊಕ್ಕಾಂನಲ್ಲಿ ಅತ್ತಿಕುಪ್ಪಾ ತಾಲ್ಲೂಕು ಅಮಿಲರ ಮೂಲಕ ಹರಾಜು ಮಾಡಿಸಲ್ಪಡುತ್ತೇಯಾಗಿ ಯಿಚ್ಛೈವುಳ್ಳ ಜನಗಳು ಆ ಕಾಲಕ್ಕೆ ಸದರೀ ಮೊಕ್ಕಾಮಿಗೆ ಹಾಜರಾಗಿ ಚಡ ದರಖಾಸ್ತು ಮಾಡಿ ಪಡಿಯಬಹುದು.

ಚಡ ದರಖಾಸ್ತುದಾರನು ಹರಾಜು ಕಾಲದಲ್ಲಿ ದರಖಾಸ್ತು ಮೊಬಲಗು ಪೈಕಿ ಸೇಕಡಾ 25 ರೂಪಾಯಿ ಪ್ರಕಾರ ಶೇವಣೀ ಯಿಡಬೇಕು. ಹರಾಜು ಆದ 15 ದಿವಸದ ವಳಗೆ ಕ್ರಯ ಮೊಬಲಗು ಪೂರಾ ಪಾವತೀ ಮಾಡಬೇಕು. ತಪ್ಪಿದಲ್ಲಿ ಶೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳುವದು ಹೊರ್ತು ಹರಾಜಾದ ಸೊತ್ತನ್ನು ಪುನಹಾ ವಿಕ್ರಯಿಸಿ ಅದರಿಂದ ಪುಂಟಾಗುವ ನಷ್ಟಕ್ಕೆ ಮೊದಲ್ ಚಡ ದರಖಾಸ್ತುದಾರನನ್ನು ಗುರಿಪಡಿಸಲ್ಪಡುತ್ತೆ.

ಅಮಿಲರವರಿಂದ ಮಾಡಿಸಲ್ಪಟ್ಟ ಹರಾಜ್ ಯಿಲ್ಲಿಂದ ಕ್ರಯಪತ್ರಂ ಆದಕೂಡ್ಲೆ ಹರಾಜು ಆದ ಸೊತ್ತನ್ನು ಚಡ ದರಖಾಸ್ತುದಾರನ ಸುಪರ್ದು ಮಾಡುತ್ತಾರೆ.

ಹರಾಜ್ ಸೊತ್ತಿನ ತಪಸೀಲ್ ವಗ್ಯೆರೇ ಅತ್ತಿಕುಪ್ಪಾ ತಾಲ್ಲೂಕು ಅಮಿಲರಲ್ಲಿ ಹೋಗಿ ತಿಳಿಕೊಳ್ಳಬೇಕು.

ವಿ. ಪಿ. ಮಾಧವರಾವ್,
ಇಂಚಾರ್ಜ್ ಆಫೀಸರ್.